# ಯುಪಿಐ ಸರ್ಕಲ್

ದೇಶ ವಿದೇಶದಲ್ಲೆಡೆ ಬಳಕೆಯಲ್ಲಿರುವ 'ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್'ನಲ್ಲಿ (ಯುಪಿಐ) 'ಪ್ರೈಮರಿ ಯೂಸರ್' ಜೊತೆಗೆ 'ಸೆಕೆಂಡರಿ ಯೂಸರ್ಸ್' ಆಯ್ಕೆಯನ್ನು ಒದಗಿಸಲಾಗಿದೆ. ಈ ಹೊಸ ಫೀಚರ್‌ಗೆ ಗೂಗಲ್ ಪೇ ಮೊದಲು ಬಾಗಿಲು ತೆರೆದಿದೆ.

■ ಶಶಿಕುಮಾರ್ ಸಿ.

ಮೊಬೈಲ್ ಬಳಕೆಯ ಬಗ್ಗೆ ಗೊತ್ತಿಲ್ಲದ ಹಿರಿಯರು, ಬ್ಯಾಂಕ್ ಖಾತೆ ಹೊಂದಿರದವರು, ವಿದ್ಯಾರ್ಥಿಗಳು ಸೇರಿದಂತೆ ಹಲವರು, ಯುಪಿಐ ಮೂಲಕ ಆನ್‌ಲೈನ್ ಪೇಮೆಂಟ್ ಮಾಡುವ ವಿಚಾರದಲ್ಲಿ ತೊಂದರೆ ಅನುಭವಿಸುತ್ತಿದ್ದರು. ಯುಪಿಐ ಬದಲಿಗೆ ನಗದಿನ ಮೊರೆ ಹೋಗುವುದು ಅಥವಾ ಆನ್‌ಲೈನ್ ಪೇಮೆಂಟ್ಸ್ ಆ್ಯಪ್ ಹೊಂದಿರುವವರ ನೆರವು ಕೇಳುವುದು ಅವರಿಗೆ ಅನಿವಾರ್ಯವಾಗಿತ್ತು. ಅಂಥವರಿಗಾಗಿ, 'ಯುಪಿಐ' ನಿರ್ವಹಣೆ ಮಾಡುತ್ತಿರುವ 'ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ'ವು (ಎನ್‌ಪಿಸಿಐ) ಈಚೆಗೆ 'ಯುಪಿಐ ಸರ್ಕಲ್' ಎಂಬ ಫೀಚರ್ ಪರಿಚಯಿಸಿದೆ.

ಪ್ರೈಮರಿ ಯೂಸರ್‌ಗಷ್ಟೇ ಇದ್ದ ಲಾಗಿನ್ ಅವಕಾಶವೀಗ ಸೆಕೆಂಡರಿ ಯೂಸರ್ಸ್‌ಗೂ ವಿಸ್ತರಿಸಿದೆ. ಈ ಮೂಲಕ ಪ್ರೈಮರಿ ಯೂಸರ್ ಜೊತೆ ಜೊತೆಗೆ ಸೆಕೆಂಡರಿ ಯೂಸರ್ಸ್ ಸಹ ಒಂದೇ ಯುಪಿಐ ಐಡಿ (ಪ್ರೈಮರಿ ಯೂಸರ್ ಯುಪಿಐ ಐಡಿ) ಮೂಲಕ ಆನ್‌ಲೈನ್ ಪಾವತಿಗಳನ್ನು ನಿರ್ವಹಣೆ ಮಾಡಬಹುದು. ಇದಕ್ಕಾಗಿ ಸೆಕೆಂಡರಿ ಯೂಸರ್ಸ್‌ಗೆ ಪ್ರತ್ಯೇಕ ಯುಪಿಐ ಐಡಿ ಬೇಕಿಲ್ಲ. ಪ್ರೈಮರಿ ಯೂಸರ್ ಯುಪಿಐ ಐಡಿ ಮೂಲಕವೇ ವ್ಯವಹಾರ ಮಾಡಬಹುದು.

ಯುಪಿಐನಲ್ಲಿ ಪ್ರೈಮರಿ ಯೂಸರ್‌ಗಷ್ಟೇ ಇದ್ದ ಲಾಗಿನ್ ಅವಕಾಶದಿಂದ ತಾಂತ್ರಿಕವಾಗಿ ಬಹುತೇಕರಿಗೆ ತೊಂದರೆಯಾಗಿತ್ತು. ಇದನ್ನು ಎನ್‌ಪಿಸಿಐ ಈಚೆಗೆ ನೀಗಿಸಿದೆ. ಡಿಜಿಟಲ್ ಪೇಮೆಂಟ್ಸ್ ಆ್ಯಪ್ ಆದ 'ಗೂಗಲ್ ಪೇ' ಆದ್ಯತೆ ಮೇರೆಗೆ ಈ ಫೀಚರ್ ಅಳವಡಿಸಿಕೊಂಡಿದ್ದು, ವ್ಯಾಪಕವಾಗಿ ಪ್ರಚಾರ ನೀಡುತ್ತಿದೆ.

ಹೊಸ ಫೀಚರ್ ಬಗ್ಗೆ ಕೆಲವು ತಿಂಗಳ ಹಿಂದಷ್ಟೇ ಎನ್‌ಪಿಸಿಐ ಘೋಷಣೆ ಮಾಡಿತ್ತು. ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ವಿತ್ತೀಯ ನೀತಿ ಸಮಿತಿ ಸಭೆಯಲ್ಲಿ, 'ಯುಪಿಐನ ಪ್ರಾಥಮಿಕ ಖಾತೆದಾರರು ತಮ್ಮ ಖಾತೆಯನ್ನು ನಿರ್ವಹಣೆ ಮಾಡಲು ಕುಟುಂಬ ಸದಸ್ಯರಿಗೆ ಅಥವಾ ನಂಬಿಕಸ್ಥರಿಗೆ ಅನುಮತಿಸುವ ಯೋಜನೆ ಜಾರಿ ಬಗ್ಗೆ ನಿರ್ಧರಿಸಿತ್ತು. ಅದರಂತೆ ಈ ಯೋಜನೆಯನ್ನು ಆಯ್ದ ಬಳಕೆದಾರರ ಗುಂಪಿನೊಂದಿಗೆ ಪ್ರಾಯೋಗಿಕವಾಗಿ ಪರೀಕ್ಷೆ ನಡೆಸಲಾಗಿದೆ.




UPI
UNIFIED PAYMENTS INTERFACE

ಪ್ರಾಥಮಿಕ ಬಳಕೆದಾರರು ದ್ವಿತೀಯ ಬಳಕೆದಾರರಿಗೆ ಒಮ್ಮೆಗೆ ₹5000ದಂತೆ ಮಾಸಿಕ ₹15,000ವರೆಗೆ ಮಾತ್ರ ವಹಿವಾಟು ನಡೆಸಬಹುದು. ದ್ವಿತೀಯ ಬಳಕೆದಾರರಿಗೆ ಆ ಪೂರ್ವನಿರ್ಧರಿತ ಮಿತಿಯೊಳಗೆ ವಹಿವಾಟುಗಳನ್ನು ಮಾಡಲು ಈ ಫೀಚರ್ ಅನುವು ಮಾಡಿಕೊಡುತ್ತದೆ. ಸೆಕೆಂಡರಿ ಯೂಸರ್ಸ್ ಮಾಡಿದ ಎಲ್ಲ ವಹಿವಾಟುಗಳ ಬಗ್ಗೆ ಪ್ರೈಮರಿ ಯೂಸರ್ಸ್‌ಗೆ ಕಾಲಕಾಲಕ್ಕೆ ಮಾಹಿತಿ ಲಭ್ಯವಾಗುತ್ತದೆ. ಹೀಗೆ ಮಾಡಿದ ಪ್ರತಿ ಪಾವತಿ ಬಗ್ಗೆ ನಿಗಾ ಇಡುವ, ಅದಕ್ಕೆ ಅನುಮತಿ ನೀಡುವ ಅಥವಾ ಪಾವತಿಯನ್ನು ನಿರಾಕರಿಸುವ ಅಧಿಕಾರವೂ ಪ್ರಾಥಮಿಕ ಬಳಕೆದಾರರಿಗೆ ಇರುತ್ತದೆ.

## ಯಾರಿಗೆಲ್ಲ ಅವಕಾಶ

ಒಂದೇ ಬ್ಯಾಂಕ್ ಖಾತೆ ಹಾಗೂ ಒಂದೇ ಯುಪಿಐ ಐಡಿಯಿಂದ ಇಬ್ಬರು (ಗರಿಷ್ಠ ಐದು ಮಂದಿಗೆ ಸೆಕೆಂಡರಿ ಯೂಸರ್ಸ್ ವಿಸ್ತರಿಸಬಹುದು) ಪೇಮೆಂಟ್ ಮಾಡಲು ಅವಕಾಶ ಕಲ್ಪಿಸಬಹುದು. ಉದಾಹರಣೆಗೆ, 'ಯುಪಿಐ ಸರ್ಕಲ್'ಗೆ ಪ್ರಾಥಮಿಕ ಬಳಕೆದಾರರಾದ ಹಿರಿಯ ನಾಗರಿಕರು ತಮ್ಮ ಮಕ್ಕಳನ್ನು ದ್ವಿತೀಯ ಬಳಕೆದಾರರಾಗಿ ಸೇರಿಸಬಹುದು. ಅಥವಾ ಮಕ್ಕಳು ತಮ್ಮ ಪೋಷಕರನ್ನು ನಿಯೋಜಿಸಬಹುದು. ಪೋಷಕರು ವಿದ್ಯಾರ್ಥಿಗಳಿಗೆ ಅಥವಾ ಕಂಪನಿಯೊಂದು ತನ್ನ ಉದ್ಯೋಗಿಗೆ ಈ ಅಧಿಕಾರವನ್ನು ನೀಡಬಹುದು.

## ಯುಪಿಐ ಸರ್ಕಲ್ ಹಿನ್ನೆಲೆ

ವ್ಯಾಪಕ ಆನ್‌ಲೈನ್ ಪೇಮೆಂಟ್ ವ್ಯವಸ್ಥೆಯಿದ್ದರೂ ಬಹುದೊಡ್ಡ ಸಂಖ್ಯೆಯ ಜನರು ನಗದು ರೂಪದ ವಹಿವಾಟು ನಡೆಸುತ್ತಿದ್ದಾರೆ. ಆ್ಯಪ್‌ಗಳ ನಿರ್ವಹಣೆ ಹಾಗೂ ಮೊಬೈಲ್ ನಿರ್ವಹಣೆ ಬಗ್ಗೆ ಗೊತ್ತಿಲ್ಲದಿರುವುದೇ ಇದಕ್ಕೆ ಕಾರಣ. ಅದಲ್ಲದೆ ಯುಪಿಐ ಬಳಸಿಕೊಳ್ಳಲು ಬ್ಯಾಂಕ್ ಖಾತೆ ಕಡ್ಡಾಯವಾಗಿರುವುದೂ ಸಮಸ್ಯೆಯಾಗಿತ್ತು. ಈ ಕಾರಣಕ್ಕಾಗಿ ಯುಪಿಐ ಸರ್ಕಲ್ ಸೃಷ್ಟಿಸಲಾಗಿದೆ.

ಯುಪಿಐ ಮೂಲಕ ನಡೆಯುತ್ತಿರುವ ಒಟ್ಟು ವಹಿವಾಟಿನ ಪೈಕಿ ಶೇಕಡ 6ರಷ್ಟು ಮಂದಿ ಹೆಚ್ಚಿನ ಸಂಖ್ಯೆಯ ವಹಿವಾಟುಗಳನ್ನು ಮಾಡುತ್ತಿದ್ದಾರೆ. ಈ ವಹಿವಾಟುಗಳೆಲ್ಲವೂ ಇತರರ ಪರವಾಗಿ ನಡೆಯುತ್ತಿವೆ ಎನ್ನುವುದು ಗಮನಾರ್ಹ ವಿಚಾರ. ಇದರ ನಡುವೆ ಸೈಬರ್ ಅಪರಾಧಗಳ ಜಾಲವು ವ್ಯಾಪಕವಾಗಿ ಹರಡಿದ್ದು, ಅರಿವಿಲ್ಲದೆ ವಂಚಕರ ಬಲೆಗೆ ಸಿಕ್ಕಿಹಾಕಿಕೊಳ್ಳುವ ಅಮಾಯಕರು ಯುಪಿಐ ಪಾವತಿ ಮೂಲಕ ಹಣ ಕಳೆದುಕೊಳ್ಳುತ್ತಿದ್ದಾರೆ. ಇದೆಲ್ಲಕ್ಕೆ ಉತ್ತರದ ರೂಪದಲ್ಲಿ ಎನ್‌ಪಿಸಿಐ 'ಯುಪಿಐ ಸರ್ಕಲ್' ರೂಪಿಸಿದೆ. ■